

# ಗುರುಭಕ್ತಿ – ಗುರು ಪರಂಪರೆ

ಭಾರತದಲ್ಲಿ ಕಲಿಕೆಗೆ, ವಿದ್ಯೆಗೆ ಮತ್ತು ಕಲಿಸುವ ಗುರುವಿಗೆ ಅಪಾರ ಮಹತ್ವ ನೀಡಿದ್ದನ್ನು ನಾವು ಕಾಣುತ್ತೇವೆ. ಮೊದಲನೆಯದಾಗಿ, ಕಲಿಕೆಯೆಂಬ ಪ್ರಕ್ರಿಯೆ. ಇದು ಮುಖ್ಯವಾಗಿ ನಡೆಯಬೇಕಾಗಿರುವುದು ಎಳೆಯ ವಯಸ್ಸಿನ ವಿದ್ಯಾರ್ಥಿಯಲ್ಲಿ. ಅವನು ಇನ್ನೂ ಅರಿವಿನ ಹಾದಿಯಲ್ಲಿ ಹೆಜ್ಜೆಯಿಡುತ್ತಿದ್ದಾನೆ; ಅವನ ಕೈಕಾಲುಗಳು ದುರ್ಬಲ, ಇನ್ನೂ ಬೆಳೆಯುತ್ತಿವೆ. ಆಗಾಗ ಹೆಜ್ಜೆ ತಪ್ಪಿ ಬೀಳುವ ಸಂಭವವಿದೆ. ಆದ್ದರಿಂದ ಕೈ ಹಿಡಿದು ಮುನ್ನಡೆಸುವ ಗುರು ಅತ್ಯಂತ ಆವಶ್ಯಕ. ಗುರುವಿನ ಮೇಲೆ ಅಪಾರ ಗೌರವ, ಭಕ್ತಿ ನೀಡುವ ಪರಂಪರೆ ನಮ್ಮದು. 'ಗುರುವೇ ಬ್ರಹ್ಮ, ವಿಷ್ಣು ಹಾಗೂ ಮಹೇಶ್ವರ. ಸಾಕ್ಷಾತ್ ಪರಬ್ರಹ್ಮನೇ ಗುರು.' 'ಆಚಾರ್ಯರೇ ದೇವರು' ಎಂಬ ವಾಕ್ಯಗಳನ್ನು ನಾವು ಕೇಳುತ್ತೇವೆ. ಹೀಗೆ ಭಕ್ತಿ–ಗೌರವಗಳನ್ನು ವಿದ್ಯಾರ್ಥಿ ಹೊಂದಿದ್ದರೆ ಮಾತ್ರ ಅವನ ಕಲಿಕೆ ಸುಸೂತ್ರವಾಗಿ ನಡೆಯುವುದು. ಗುರುಭಕ್ತಿಯಿಲ್ಲದಿದ್ದರೆ ಶಿಷ್ಯನು ಗುರು ಹೇಳಿದ್ದನ್ನು ಏಕೆ ಕೇಳುತ್ತಾನೆ? ಅಲ್ಲಿ ಕಲಿಕೆ ಮುಂದುವರಿಯದು. ಅದೇ ರೀತಿ, ಗುರುವಿನ ಮೇಲೆ ಶ್ರದ್ಧೆಯಿಲ್ಲದಿದ್ದರೆ ತಾನು ಕಲಿಯುವ ವಿದ್ಯೆಯ ಮೇಲೂ ಶ್ರದ್ಧೆಯಿರದು. ಈ ರೀತಿ ಕಲಿಕೆ ಇಲ್ಲಿ ವಿಫಲವಾಗುವುದು. ಎರಡನೆಯದಾಗಿ, ವಿದ್ಯೆ. 'ವಿದ್ಯೆಯಿಲ್ಲದವನು ಪಶುವಿಗೆ ಸಮಾನ' ಎಂಬ ಮಾತಿನಲ್ಲಿ ನಮ್ಮ ಸಂಸ್ಕೃತಿ ವಿದ್ಯೆಗೆ ನೀಡಿದ ಪ್ರಾಮುಖ್ಯತೆಯನ್ನು ಕಾಣಬಹುದು. ಸಂಸ್ಕಾರ, ಅದರಲ್ಲೂ ಬೌದ್ಧಿಕ–ಮಾನಸಿಕ ಸಂಸ್ಕಾರವೇ ಮನುಷ್ಯನನ್ನು ಮೃಗಕ್ಕಿಂತ ಭಿನ್ನವಾಗಿಸಿದೆ. ಈ ಸಂಸ್ಕಾರದಲ್ಲಿ ವಿದ್ಯೆಗೆ ಅತಿ ಎತ್ತರದ ಸ್ಥಾನವಿದೆ. ಎಲ್ಲವನ್ನೂ 'ತಾನಾಗಿಯೇ' ಕಲಿತುಕೊಳ್ಳುವುದಕ್ಕೆ ಎಷ್ಟೋ ದೀರ್ಘಕಾಲ ಬೇಕಾಗುವುದು; ಅದಕ್ಕೆ ಬದಲಾಗಿ ಚೆನ್ನಾಗಿ ಪಳಗಿದ ಹಿರಿಯರಿಂದ ಕಲಿತರೆ, ಪ್ರತಿಯೊಂದು ವಿದ್ಯೆಯನ್ನೂ ಕ್ಷಿಪ್ರವಾಗಿ ಕಲಿಯಬಹುದು. ಇದು ವಿದ್ಯಾಪರಂಪರೆ. ಕಲಿಯುವ, ಕಲಿಸುವ ಪದ್ಧತಿ ಅತಿ ಪ್ರಾಚೀನ ಕಾಲದಿಂದಲೇ ಆರಂಭವಾಯಿತು. ಆದರೆ ಇಂಥ ವಿದ್ಯೆಗೆ ಅತಿ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದು ನಮ್ಮಲ್ಲೆ. ಮೂರನೆಯದಾಗಿ, ಕಲಿಸುವ ಗುರುವಿಗೆ ಅಪಾರ ಭಕ್ತಿ, ಗೌರವ ನೀಡಬೇಕೆಂಬ ಸಂಪ್ರದಾಯ ಕೂಡ ನಮ್ಮಲ್ಲೇ ಅತ್ಯಂತ ಪ್ರಾಚೀನ ಕಾಲದಲ್ಲಿ ಬೆಳೆದು ಬಂತು. ಇದಕ್ಕೆ ಕಾರಣ ವಿದ್ಯೆ, ಕಲಿಸುವ ಪ್ರಕ್ರಿಯೆ ಎರಡಕ್ಕೂ ನಮ್ಮವರೂ ನೀಡಿದ ಮಹತ್ವ; ಅವೆರಡೂ ಗುರುವನ್ನೇ ಅವಲಂಬಿಸಿದೆ. ಕೇವಲ ಅಕ್ಷರ ಕಲಿಸುವವನಷ್ಟೇ ಗುರುವಲ್ಲ; ಜೀವನದಲ್ಲಿ ಏನನ್ನಾದರೂ ಕಲಿಸಲಿ ಸಾಕು, ಅವನು ಗುರುವಾಗುತ್ತಾನೆ. ಹೀಗೆ 'ಗುರು' ಪದಕ್ಕೆ ವ್ಯಾಪಕ ಅರ್ಥವಿದೆ.

## ಕತ್ತಲ ದಾರಿಯಲ್ಲಿ ಬೆಳಕಿನ ಕಿರಣ

ಆಧ್ಯಾತ್ಮಿಕ ಜೀವನದಲ್ಲಿ ಗುರುವಿಗಿರುವ ಮಹತ್ವ ಉಳಿದೆಲ್ಲ ಕ್ಷೇತ್ರಗಳಿಗಿಂತ ಅಧಿಕವೆನ್ನಬೇಕು. ಉಳಿದ ಕ್ಷೇತ್ರಗಳಲ್ಲಿ ಶಿಷ್ಯನಿಗೆ ಮಾರ್ಗ ಗೋಚರಿಸುತ್ತದೆ. ಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿ; ಬಡಗಿ, ಕಮ್ಮಾರ, ಕೃಷಿಕ, ಯಂತ್ರ ದುರಸ್ತಿ ಮಾಡುವವ (ಮೆಕ್ಯಾನಿಕ್), ವ್ಯಾಪಾರಿ, ಕಟ್ಟಡ ಕಟ್ಟುವವ — ಇವರೆಲ್ಲ ತುಸು ಗಮನ ಕೊಟ್ಟರೆ ಸಾಕು, ಈ ಕೆಲಸಗಳನ್ನು ತಾವಾಗಿ ಕಲಿಯಬಹುದು. ಆದರೆ ಕಲಿಯುವ ವಿಷಯ ಬೌದ್ಧಿಕವಾಗಿದ್ದಷ್ಟೂ, ಸೂಕ್ಷ್ಮವಾಗಿದ್ದಷ್ಟೂ ಚೆನ್ನಾಗಿ ನುರಿತ ಗುರುವಿನ ಅಗತ್ಯ ಹೆಚ್ಚು. ಉದಾಹರಣೆಗೆ, ಗಣಿತ. ಅದೇ ರೀತಿ ಹಲವು ವೈಜ್ಞಾನಿಕ ವಿಚಾರಗಳನ್ನೂ ಅಧ್ಯಾಪಕರ ಸಹಾಯವಿಲ್ಲದೆ ಕಲಿಯಲಾಗುವುದಿಲ್ಲ.

ಬೌದ್ಧಿಕ ಕ್ಷೇತ್ರಗಳಲ್ಲಿ ಗುರುವಿನ ಅಗತ್ಯಕ್ಕೆ ಕಾರಣವಿದು: ಹಲವು ವಿಷಯಗಳಲ್ಲಿ ಅರಿವಿನ ಮಾರ್ಗವೆಂದರೆ ಅದು ಕತ್ತಲ ದಾರಿ. ಶಿಷ್ಯ ಸುಮ್ಮನೆ ತಡಕಾಡುತ್ತಲೇ ಇರಬೇಕು; ಆದರೂ ಬೆಳಕು ಕಾಣಿಸದು. ಬೆಳಕು ನೀಡುವ ಯಾರೋ ಒಬ್ಬ ದೀಪ ತರಲೇಬೇಕು. ಅವನೇ ಗುರು. ಲೌಕಿಕ ವಿಚಾರಗಳಲ್ಲೇ ಇದು ಹೀಗಿರುವಾಗ, ಇನ್ನು ಆಧ್ಯಾತ್ಮಿಕ ವಿಚಾರದಲ್ಲಿ ಇದು ಇನ್ನೆಷ್ಟು ಅನಿವಾರ್ಯವಾಗಿರಬೇಡ! ಆಧ್ಯಾತ್ಮಿಕ ಮಾರ್ಗವೆಂದರೆ ಅದು ಇನ್ನಷ್ಟು ಸೂಕ್ಷ್ಮ; ಮಾನಸಿಕ–ಬೌದ್ಧಿಕ ಹಂತವನ್ನು ದಾಟಿ, ಇನ್ನೂ ಉನ್ನತವಾದ ಆಯಾಮವನ್ನು ಪಡೆಯಬೇಕು. ಅಲ್ಲಿ ಶಿಷ್ಯನಾದವನು ಏಕಾಂಗಿ ಸಾಹಸ ಮಾಡಹೊರಟರೆ, ಯಾವ ಹಂತದಲ್ಲಾದರೂ ಪತನವಾಗುವ ಸಂಭವವಿದೆ; ಕತ್ತಲಲ್ಲಿ ಏನೂ ತಿಳಿಯದೆ ದಿಕ್ಕುಗೆಡುವ ಸಾಧ್ಯತೆಯಿದೆ. ಆದ್ದರಿಂದ ಇಲ್ಲಿ ಪರಿಪೂರ್ಣತೆಯನ್ನು ಪಡೆದ, ಅಂದರೆ ಆಧ್ಯಾತ್ಮಿಕ ಮಾರ್ಗದಲ್ಲಿ ಸಾಕಷ್ಟು ಮುಂದುವರಿದ ಗುರುವಿನ ಮಾರ್ಗದರ್ಶನದ ಅಗತ್ಯವಿದೆ.

## 'ಅಂಧೇನೈವ ನೀಯಮಾನಾ ಯಥಾಂಧಾಃ'

ಶಿಷ್ಯನನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸುವ ಗುರು ಕೂಡ ಸಮರ್ಥನಾಗಿರಬೇಕು; ಶಿಷ್ಯನ ಇತಿಮಿತಿ, ಸಾಮರ್ಥ್ಯಗಳನ್ನರಿತು, ಅವನನ್ನು ಅರ್ಥಮಾಡಿಕೊಂಡು ಮುನ್ನಡೆಸಲು ಅಗತ್ಯವಾದ ಅರ್ಹತೆ ಅವನಿಗಿರಬೇಕು. ಇಲ್ಲದೆ ಹೋದರೆ, ಗುರುವೇ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಮುಂದುವರಿಯದೆ ಅಪಕ್ವನಾಗಿದ್ದರೆ, ಅದು 'ಕುರುಡನು ಕುರುಡನಿಗೆ ದಾರಿ ತೋರಿಸಿದಂತೆ' ಎನ್ನುತ್ತದೆ ಕಠೋಪನಿಷತ್ತು. ದಾರಿ ತೋರಿಸುವವನಿಗೆ ಗುರಿ, ಮಾರ್ಗ ಇವೆರಡೂ

ಚೆನ್ನಾಗಿ ಗೊತ್ತಿರಬೇಕು. ಆದ್ದರಿಂದ ಆಧ್ಯಾತ್ಮಿಕ ಗುರು ಸಾಕ್ಷಾತ್ಕಾರ ಪಡೆದವನಾಗಿರಬೇಕು, ಪರಿಪೂರ್ಣತೆಯನ್ನು ಹೊಂದಿದವನಾಗಿರಬೇಕು ಎಂದು ಶಾಸ್ತ್ರಗಳು ಹೇಳುತ್ತವೆ. **'ಆಶ್ಚರ್ಯೋಽ ವಕ್ತಾ ಕುಶಲೋಽಸ್ಯ ಲಬ್ಧಾ ಆಶ್ಚರ್ಯೋಽ ಜ್ಞಾತಾ ಕುಶಲಾನುಶಿಷ್ಟಃ'** (ಹೇಳುವವನು ಆಶ್ಚರ್ಯಕರ ವ್ಯಕ್ತಿ; ಪಡೆಯುವವನೂ ಕುಶಲನು. ಕುಶಲನಿಂದ ತಿಳಿದುಕೊಳ್ಳುವವನೂ ಆಶ್ಚರ್ಯಕರನಾದವನು) ಎಂದು ಕಠೋಪನಿಷತ್ತು ಹಾಗೂ ಗೀತೆ ಹೇಳುತ್ತವೆ.(ಕಠ, ೧.೨.೭; ಗೀತೆ, ೨.೨೯) ಗುರು ಸಮರ್ಥನಿದ್ದೂ, ಕಲಿಯುವ ಶಿಷ್ಯ ಮಂದಬುದ್ಧಿಯವನಾಗಿದ್ದರೆ ವಿದ್ಯೆ ಚೆನ್ನಾಗಿ ನಡೆಯದು. ವಿದ್ಯೆಯೆಂಬ ಪ್ರಕ್ರಿಯೆ ಪ್ರಧಾನವಾಗಿ ಗುರು-ಶಿಷ್ಯರಿಬ್ಬರ ಮನಸ್ಸುಗಳ ನಡುವೆ ನಡೆಯುವ ಸಂವಹನ ಕ್ರಿಯೆ. ಅದಕ್ಕೆ ಇಬ್ಬರ ಮನಸ್ಸುಗಳೂ ಕುಶಲವಾಗಿರಬೇಕು, ಸೂಕ್ಷ್ಮವಾಗಿರಬೇಕು. ಸಾಮಾನ್ಯರಿಗೆ ಹೋಲಿಸಿದರೆ ಅವರಿಬ್ಬರೂ ಕುಶಲರಷ್ಟೇ ಅಲ್ಲ; 'ಅದ್ಭುತ'ರು. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಸಾಹಸಕಾರ್ಯವನ್ನು ಕೈಗೊಳ್ಳುವ ವ್ಯಕ್ತಿ ಪರ್ವತಾರೋಹಿಗಿಂತ, ಸಮುದ್ರವನ್ನು ಈಜುವವನಿಗಿಂತ, ಅಥವಾ ಯುದ್ಧದಲ್ಲಿ ಎದೆಗುಂಡಿಗೆಯನ್ನೊಡ್ಡಿ ಮುನ್ನುಗ್ಗುವ ಯೋಧನಿಗಿಂತ ಸಾಹಸಿ. ಕಾರಣ, ಈತನಿಗೆ ಪ್ರಪಂಚದ ಯಾವ ಆಸೆ-ಆಮಿಷಗಳೂ ತಡೆಯೊಡ್ಡಲಾರವು; ಪ್ರಪಂಚದ ಯಾವ ಸಂಪತ್ತೂ ಅವನಿಗೆ ಅಲ್ಪವೆನಿಸುವುವು. ತನ್ನ ಮನಸ್ಸಿನ ತಳಮಳ, ಅಂಜಿಕೆ, ಹಿಂಜರಿಕೆ, ದೌರ್ಬಲ್ಯಗಳನ್ನು ಮೆಟ್ಟಿ ನಿಂತು ಅವನು ಮುಂದೆ ಸಾಗುತ್ತಾನೆ. ಅದಕ್ಕೆ ಅವನನ್ನು ತಯಾರು ಮಾಡುವ ಗುರು ಕೂಡ ಅಸಾಧಾರಣ ವ್ಯಕ್ತಿಯಾಗಿರಬೇಕು. ಅಪ್ರತಿಮ ಮಾನಸಿಕ, ಬೌದ್ಧಿಕ ಶಕ್ತಿಯುಳ್ಳ ಗುರು ತನ್ನ ಶಿಷ್ಯನ ಮನಸ್ಸು-ಬುದ್ಧಿಗಳನ್ನು ಪಳಗಿಸಿ, ಆಧ್ಯಾತ್ಮಿಕ ಪ್ರಯಾಣಕ್ಕೆ ಸಿದ್ಧಗೊಳಿಸುತ್ತಾನೆ. ಆದ್ದರಿಂದ ಇವರಿಬ್ಬರೂ 'ಆಶ್ಚರ್ಯಕರ' ವ್ಯಕ್ತಿಗಳು.

### ಅತಿ ಸೂಕ್ಷ್ಮವಾದ ದಾರಿ - 'ಕ್ಷುರಸ್ಯಧಾರಾ'

ಸಾಧಕನ ಮಾರ್ಗ ಸುಲಭವಲ್ಲ. ಪ್ರತಿ ಹೆಜ್ಜೆ ಕೂಡ ಕುಸಿದು ಬೀಳುವಂತಹದು. ಆಧ್ಯಾತ್ಮಿಕ ಪ್ರಯಾಣದ ಉದ್ದಕ್ಕೂ ಒಂದಲ್ಲ ಒಂದು ಅಪಾಯ ಇದ್ದೇ ಇರುತ್ತದೆ. ಅಂತಿಮ ಗುರಿಯನ್ನು ಮುಟ್ಟುವವರೆಗೂ ಸಾಧಕನು ಎಚ್ಚರವಾಗಿರಬೇಕು; ಎಂಥ ಅಪಾಯ, ಅಡ್ಡಿ ಆತಂಕವನ್ನಾದರೂ ಎದುರಿಸಿ ಮುನ್ನುಗ್ಗಲು ಅವನು ಸಿದ್ಧನಾಗಿರಬೇಕು. ಇಂಥ ಅಪಾಯಕರ ಹಾದಿಯಿದು ಎನ್ನಲು ಕಾರಣವೇನು? ಲೌಕಿಕ ಅಥವಾ ಭೌತಿಕ ಅಡ್ಡಿಆತಂಕಗಳು ಇಲ್ಲಿ ನಗಣ್ಯ. ಕುಟುಂಬದ ಜನರ ಪ್ರತಿರೋಧ, ಸಾಧನೆಗೆ ಯೋಗ್ಯವಾದ ಸ್ಥಳದ ಅಭಾವ, ಉತ್ತಮ ಆರೋಗ್ಯ ಇಲ್ಲದಿರುವುದು — ಇವೆಲ್ಲ ಭೌತಿಕ ಅಥವಾ ಪ್ರಾಪಂಚಿಕ ಅಡೆತಡೆಗಳು. ಪ್ರಯತ್ನಪಟ್ಟು ಇವನ್ನೆಲ್ಲ ಮೀರಿ ನಿಲ್ಲುವುದು ಸಾಧ್ಯ. ಆದರೆ ಎಲ್ಲಕ್ಕಿಂತ ಕಠಿಣ ಕಾರ್ಯವೆಂದರೆ, ಸಾಧಕನು ತನ್ನ ಮನಸ್ಸನ್ನೇ ಗೆಲ್ಲಬೇಕು. ಇದು ಅತ್ಯಂತ ಕಷ್ಟಕರವಾದ ಕಾರ್ಯ. ನೈಸರ್ಗಿಕವಾಗಿ ಎಲ್ಲರಿಗೂ ಇದ್ದೇ ಇರುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ — ಈ ವೈರಿಗಳನ್ನು ಗೆಲ್ಲುವುದು ಅತ್ಯಂತ ಕಠಿಣ. ಒಂದನ್ನು ಗೆದ್ದೆನೆಂದಾಗ, ಇನ್ನೊಂದು ಮೇಲಕ್ಕೆದ್ದು ಬರುವುದು. ಎಷ್ಟೇ ಹೋರಾಡಿದರೂ ಈ ಭಾವಗಳನ್ನು ಗೆದ್ದೆನೆನ್ನಲಾಗದು. ಮನಸ್ಸಿನ ಆಳದಲ್ಲಿ ಸುಪ್ತವಾಗಿದ್ದು, ಬೇರಾವುದೋ ಸಂದರ್ಭದಲ್ಲಿ ಇಮ್ಮಡಿ ಬಲದಿಂದ ಅವು ಮೇಲಕ್ಕೆದ್ದು ಬರುವವು. ಅವುಗಳ ಬಲದ ಮುಂದೆ ಸಾಧಕನ ಮನಸ್ಸು ದುರ್ಬಲವಾಯಿತೋ, ಪತನ ಕಟ್ಟಿಟ್ಟ ಬುತ್ತಿ. ಈ ಕಾರಣಕ್ಕಾಗಿ ಸಾಧಕನು ಪ್ರತಿ ಕ್ಷಣವೂ ಹೋರಾಡಬೇಕು; ಪ್ರತಿ ಕ್ಷಣವೂ ತನ್ನ ಮನಸ್ಸನ್ನು ಗಮನಿಸುತ್ತ ಎಚ್ಚರವಾಗಿರಬೇಕು. ಇಷ್ಟು ಕಠಿಣವಾದ, ಪ್ರತಿಕ್ಷಣವೂ ಹೋರಾಡುವ ಈ ಮಾರ್ಗವನ್ನು ಕಠೋಪನಿಷತ್ತು, **'ಕ್ಷುರಸ್ಯಧಾರಾ'** ಎಂದು ಕರೆದಿದೆ; ಅಂದರೆ ಈ ಮಾರ್ಗ ಕ್ಷೌರಿಕನ ಕತ್ತಿಯ ಅಲಗಿನಂತೆ ಹರಿತವಾದದು. ಸಾಧಕನ ಜೀವನವೆಂದರೆ ಕತ್ತಿ ಅಲಗಿನ ಮೇಲೆ ನಡೆದಂತೆ. ಆಮಿಷ, ಆಸೆ-ಆಕಾಂಕ್ಷೆ, ಕಾಮ-ಕ್ರೋಧಾದಿಗಳು ಪ್ರತಿ ಕ್ಷಣವೂ ಸೆಳೆಯುತ್ತವೆ. ಬಲಿಯಾದನೋ, ಕತ್ತಿಯ ಅಲಗು ಅವನ ಕಾಲನ್ನು ಕತ್ತರಿಸಿಬಿಡುತ್ತದೆ. ಅವನು ಮುಂದೆ ನಡೆಯಲಾಗದು. ಆದ್ದರಿಂದಲೇ ಅದು 'ನಿಶಿತಾ' (ಅತ್ಯಂತ ಹರಿತವಾದುದು) ಹಾಗೂ 'ದುರತ್ಯಯಾ'(ದಾಟಲು ಕಷ್ಟವಾದದ್ದು).

ಇಷ್ಟೆಲ್ಲ ಕಷ್ಟವಾದ ಮಾರ್ಗ ಇದೆಂದು ತಿಳಿದೂ ಸಾಧಕನೂ ಏಕೆ ಆಧ್ಯಾತ್ಮಿಕ ಪಥವನ್ನು ಹಿಡಿಯುತ್ತಾನೆ? ಪ್ರಪಂಚದಲ್ಲಿ ಎಲ್ಲರಂತೆ ಕುಟುಂಬ ಜೀವನ ನಡೆಸುತ್ತ, ಹಲವು ಸುಖಭೋಗಗಳನ್ನು ಅನುಭವಿಸುತ್ತ ಸಹಜವಾದ ನೋವು-ನಲಿವುಗಳೊಂದಿಗೆ ಬದುಕನ್ನು ಸಾಗಿಸಬಹುದಲ್ಲ? ಆಧ್ಯಾತ್ಮಿಕ ಜೀವನದ ಶ್ರೇಷ್ಠತೆ ಇರುವುದೇ ಇಲ್ಲಿ. ಆಧ್ಯಾತ್ಮಿಕ ಸಾಧಕನಿಗೆ ಬೇಕಾಗಿರುವುದು ಸತ್ಯವೊಂದೇ. ಭಗವಂತನೊಬ್ಬನನ್ನು ಬಿಟ್ಟರೆ ಪ್ರಪಂಚದ ಯಾವ ವಸ್ತುವಿನಲ್ಲೂ ಸಾರವಿಲ್ಲ; ಅವೆಲ್ಲವೂ ಅನಿತ್ಯ ಹಾಗೂ ಮಿಥ್ಯೆ. ಅವು ಮಾನವನ ಇಂದ್ರಿಯಗಳನ್ನು ಮರುಳುಗೊಳಿಸಿ ಸೆಳೆಯುತ್ತವೆ; ಪ್ರಪಂಚದ ಸುಖಭೋಗಗಳಲ್ಲಿ ಮೈಮರೆತು ಅವನು ಸತ್ಯವನ್ನು ಮರೆಯುತ್ತಾನೆ. ತನ್ನಿಂದ ಮರೆಮಾಚಲ್ಪಟ್ಟಿರುವ ಸತ್ಯವನ್ನು ಕಾಣುವುದೇ ಸಾಧಕನ ಗುರಿ; ಭಗವಂತನೇ ಆ ಪರಮ ಸತ್ಯ. ಅದನ್ನು ಕಾಣುವವರೆಗೂ ಸಾಧಕನು ವಿರಮಿಸಲಾರ; ಅದಕ್ಕಾಗಿ ಅವನು ಎಂಥ ಅಪಾಯವನ್ನಾದರೂ ಎದುರಿಸಬಲ್ಲ. ಪ್ರತಿ ಕ್ಷಣವೂ ಬೀಳುವ ಸಂಭವವಿದ್ದರೂ, ತನ್ನ ಇಡೀ ಜೀವನವೇ ನಷ್ಟವಾಗಿ ಹೋಗುವ ಸಾಧ್ಯತೆಯಿದ್ದರೂ ಅವನು ಲೆಕ್ಕಿಸಲಾರ. ತನ್ನ ಮುಂದೆ ಉಜ್ಜ್ವಲವಾಗಿ ಬೆಳಗುತ್ತಿರುವ ಗುರಿಯೊಂದೇ ಅವನ ಗಮನದಲ್ಲಿರುವುದು. ಅದರ ಕಡೆಗೆ ಸುರಕ್ಷಿತವಾಗಿ ಅವನು ಸಾಗಲು ಅವನಿಗಿರುವ ಏಕೈಕ ಸಹಾಯವೆಂದರೆ — ಗುರು ಮಾತ್ರ. ಗುರುವಿನಲ್ಲಿ ಶರಣಾಗತನಾಗಿ, ಅವನ ಮಾರ್ಗದರ್ಶನದಂತೆ ಮುನ್ನಡೆಯುವುದು ಮಾತ್ರವೇ ಅವನನ್ನೂ ಎಲ್ಲ ಬಗೆಯ ಅಪಾಯದಿಂದ ಪಾರುಮಾಡಿ, ಗುರಿಯನ್ನು ತಲುಪುವಂತೆ ಮಾಡಬಲ್ಲದು. ಆದ್ದರಿಂದಲೇ ಗುರುವನ್ನು 'ಕರ್ಣಧಾರ' ಅಥವಾ 'ನದಿ ದಾಟಿಸುವವನು' ಎನ್ನಲಾಗಿದೆ. ಈ ಭವಸಾಗರವನ್ನು ದಾಟಿಸುವ ಅಂಬಿಗನೇ ಗುರುವಾಗಿದ್ದಾನೆ. ಆದ್ದರಿಂದ ಅವನೇ ಸಾಧಕನ ಪಾಲಿಗೆ ಎಲ್ಲರಿಗಿಂತ ಪೂಜ್ಯನಾಗಿರುವನು.

### ಗುರು ಪರಂಪರೆ

ಆಧ್ಯಾತ್ಮಿಕ ಜಗತ್ತಿನಲ್ಲಿ ಸಾಧಕನಿಗೆ ಗುರುವಿನ ಆವಶ್ಯಕತೆ ಉಳಿದೆಲ್ಲ ಕ್ಷೇತ್ರಗಳಿಗಿಂತ ಅಧಿಕವೆಂಬುದನ್ನು ನೋಡಿದೆವು. ಆದರೆ ಯೋಗ್ಯನಾದ ಗುರು ಲಭ್ಯನಾಗುವುದೇ ಅತ್ಯಂತ ದುಸ್ತರವಾದುದು. ಅದಕ್ಕಾಗಿ ಶಿಷ್ಯನು ಪ್ರಪಂಚದ ಯಾವ ಮೂಲೆಗಾದರೂ ಹೋಗಬೇಕು, ಎಂತಹ ಕಷ್ಟಪರಂಪರೆಯನ್ನಾದರೂ ಎದುರಿಸಬೇಕು.

ಒಂದು ವೇಳೆ ಅವನಿಗೆ ಯೋಗ್ಯ ಗುರು ದೊರೆತನೆಂದರೆ, ಅವನನ್ನು ಮಹಾಭಾಗ್ಯಶಾಲಿಯೆನ್ನಬೇಕು. ಕಾರಣ, ಅನೇಕ ಜನ್ಮಜನ್ಮಾಂತರಗಳಿಂದ ಮುಂದುವರಿದುಕೊಂಡು ಬಂದ ಈ ಜನ್ಮಪರಂಪರೆ ಆ ಮಹಾತ್ಮನಾದ ಗುರುವಿನಿಂದಾಗಿ ಕೊನೆಗೊಳ್ಳುವುದು. ಪರಮಾತ್ಮನ ಸಾಕ್ಷಾತ್ಕಾರದಿಂದ ಮಾತ್ರವೇ ಕೊನೆಯಿಲ್ಲದ ಈ ಸಂಸಾರಯಾತ್ರೆ ನಿಲ್ಲುವುದು; ಎಲ್ಲವನ್ನೂ ಮೀರಿದ ಶಾಂತಿ, ಆನಂದ, ತೃಪ್ತಿ ಹಾಗೂ ಸಾರ್ಥಕ್ಯ ಅವನದಾಗುವುದು. ಆದರೆ ಹಲವು ಬಾರಿ ಕಂಡುಬರುವಂತೆ, ಒಬ್ಬ ಸಾಧಕನ ಜೀವನದಲ್ಲಿ ಒಬ್ಬ ಪ್ರಧಾನ ಗುರು ದೊರಕಿದರೂ, ಅದರೊಂದಿಗೆ ಇನ್ನೂ ಅನೇಕ ಗುರುಗಳು ಸಹಾಯಕರಾಗಿ ಲಭಿಸುತ್ತಾರೆ. ಒಬ್ಬೊಬ್ಬ ಗುರು ಕೂಡ ಹಲವು ರೀತಿಯಲ್ಲಿ ಮಾರ್ಗದರ್ಶನ ಮಾಡುತ್ತಾರೆ. ದೇಹಧಾರಿಯಾಗಿ ಒಬ್ಬ ಗುರು ಬಂದು ಶಿಷ್ಯನಿಗೆ ಮಾರ್ಗದರ್ಶನ ಮಾಡುತ್ತಾನೆ; ಇನ್ನು ಕೆಲವು ಗುರುಗಳು ಅದೃಶ್ಯರಾಗಿದ್ದುಕೊಂಡು ಶಿಷ್ಯನಿಗೆ ಮಾರ್ಗದರ್ಶನ ಮಾಡಬಹುದು. ಕೆಲವೊಮ್ಮೆ ದಿವ್ಯ ದರ್ಶನದ ಮೂಲಕವೂ ಗುರು ಕಾಣಿಸಿಕೊಂಡು ಶಿಷ್ಯನನ್ನು ಮುನ್ನಡೆಸಬಹುದು. ಇದನ್ನೆಲ್ಲ ಗಮನಿಸಿದರೆ, 'ಗುರು' ಎಂದರೆ ಒಬ್ಬ ವ್ಯಕ್ತಿ ಎಂಬುದಕ್ಕಿಂತ ಹೆಚ್ಚಾಗಿ, ಅದೊಂದು ಪರಂಪರೆ ಎಂದು ಕರೆಯಬೇಕಾಗುವುದು.

ಗುರುವಿನಿಂದ ಶಿಷ್ಯನಿಗೆ ಆಧ್ಯಾತ್ಮಿಕ ಜ್ಞಾನ ಹರಿದುಬರುವುದು. ಭಗವಂತನ ಸಾಕ್ಷಾತ್ಕಾರ ಪಡೆಯಲು ಏನು ಮಾಡಬೇಕು? ಯಾವ ಬಗೆಯ ಸಾಧನೆಯ ಅಗತ್ಯವಿದೆ? ಅಂಥ ಸಾಧನೆಯ ವಿಧಾನ ಯಾವುದು? ಸಾಧನೆಗೆ ಹೊಂದಿರಬೇಕಾದ ಅಗತ್ಯಗಳೇನು? ತ್ಯಾಗ, ವೈರಾಗ್ಯ, ಜ್ಞಾನ, ಭಕ್ತಿ ವಿವೇಕ, ಇಂಥ ಆಧ್ಯಾತ್ಮಿಕ ಗುಣಗಳನ್ನು ಬೆಳೆಸಿಕೊಳ್ಳುವುದು ಹೇಗೆ? — ಇವನ್ನೆಲ್ಲ ಗುರು ಶಿಷ್ಯನಿಗೆ ಕಲಿಸಿಕೊಡುತ್ತಾನೆ. ಶಿಷ್ಯನು ಇವನ್ನೆಲ್ಲ ಕಲಿತು ಆಧ್ಯಾತ್ಮಿಕವಾಗಿ ಮುಂದುವರಿಯುತ್ತಾನೆ. ಮುಂದೆ ಅದೇ ಶಿಷ್ಯ ಇತರರಿಗೆ ಗುರುವಾಗುತ್ತಾನೆ; ಅವರಿಗೆ ಸಾಧನೆಯಲ್ಲಿ ನೆರವಾಗುತ್ತಾನೆ. ಹೀಗೆ ಈ ವಿದ್ಯೆ ಗುರುಪರಂಪರೆಯ ಮೂಲಕ ಮುಂದುವರಿಯುತ್ತದೆ.

ಗುರುಪರಂಪರೆಯಲ್ಲಿ ಹಲವು ಮಂದಿ ಗುರುಗಳನ್ನು ಸ್ವೀಕರಿಸಲು ಯಾವುದೇ ನಿಷೇಧವಿದ್ದಂತೆ ಕಂಡುಬರುವುದಿಲ್ಲ. ಕೆಲವೊಂದು ಪಂಥ, ಸಂಪ್ರದಾಯಗಳಲ್ಲಿ ಅನ್ಯ ಪಂಥದ ಗುರುಗಳ ಬಳಿಗೆ ಹೋಗದಂತೆ ತಡೆಯುವುದು ಸಹಜ; ಆದರೆ ಅದೇ ಪಂಥ-ಸಂಪ್ರದಾಯದ ಇತರ ಗುರುಗಳ ಬಳಿಗೆ ಹೋಗಿ ಕಲಿಯುವುದು ಸಾಧ್ಯವಿದೆ. ಪ್ರಾಚೀನ ಉಪನಿಷತ್ತುಗಳಲ್ಲೇ ಅನೇಕ ಮಂದಿ ಗುರುಗಳಿಂದ ವಿದ್ಯೆಯನ್ನು ಕಲಿತ ಉಲ್ಲೇಖಗಳಿವೆ. ಪ್ರಧಾನ ಅಂಶವೇನೆಂದರೆ, ವಿದ್ಯೆ ಯಾವ ಗುರುವಿನಿಂದಲೇ ಬರಲಿ, ಶಿಷ್ಯನು ಗುರಿ ತಲುಪುವುದು ಮುಖ್ಯ. ಅದಕ್ಕೆ ಅವನಿಗೆ ದಾರಿ ತೋರಿಸಿಕೊಟ್ಟ ಗುರು ಯಾರೇ ಇರಲಿ, ಎಷ್ಟೇ ಜನರಿರಲಿ, ಅವರೆಲ್ಲರೂ ಗುರುಗಳೇ; ಎಲ್ಲರೂ ಪೂಜ್ಯರೇ.

### 'ಸಚ್ಚಿದಾನಂದನೇ ಗುರು'

ಗುರುಪರಂಪರೆಯ ಮೂಲಕ ಹರಿದು ಬಂದ ಅಧ್ಯಾತ್ಮ ವಿದ್ಯೆಯನ್ನು ಪಡೆದ ಶಿಷ್ಯನು ಮುಂದುವರಿದಂತೆಲ್ಲ ಗಮನಿಸುತ್ತಾನೆ, ಸಾಕ್ಷಾತ್ ಪರಬ್ರಹ್ಮನೇ ತನ್ನ ಗುರುವಿನ ರೂಪದಲ್ಲಿ ಬಂದು ತನಗೆ ಉಪದೇಶ ಮಾಡಿದ್ದಾನೆ ಎಂಬುದಾಗಿ. ಎಲ್ಲ ಮಾನವರೂ ಭಗವಂತನ ಆವಿರ್ಭಾವರೇ; ಆದರೆ ಭಗವಂತನ ಕಡೆಗೆ ದಾರಿ ತೋರಿಸುವ ವ್ಯಕ್ತಿಯಲ್ಲಿ ಭಗವಂತ ವಿಶೇಷವಾಗಿ ವ್ಯಕ್ತನಾಗಿದ್ದಾನೆ. ಆದ್ದರಿಂದ ತನ್ನ ಗುರುವನ್ನು ಪರಮಾತ್ಮನೆಂದೇ ಭಾವಿಸಬೇಕು — ಏಕೆಂದರೆ, ನಿಜವಾಗಿಯೂ ಗುರು ಪರಮಾತ್ಮನ ಆವಿರ್ಭಾವವೇ ಆಗಿದ್ದಾನೆ. ''ಇರತಕ್ಕ ಗುರು ಕೇವಲ ಒಬ್ಬನೇ ಒಬ್ಬ. ಆತನೇ ಸಚ್ಚಿದಾನಂದ. ಆತ ಮಾತ್ರವೇ ಶಿಕ್ಷಣ ಕೊಡಬಲ್ಲ'' — ಎನ್ನುತ್ತಾರೆ ಶ್ರೀರಾಮಕೃಷ್ಣರು. ಅನೇಕ ಮಂದಿ ಗುರುಗಳ ರೂಪದಲ್ಲಿ ಕಾಣಿಸಿಕೊಂಡು ವಿದ್ಯೆ ನೀಡುವ ಎಲ್ಲ ಗುರುಗಳೂ ಅಂತಿಮವಾಗಿ ಒಂದೇ ಗುರುವಿನ ಆವಿರ್ಭಾವ; ಆ ಪರಮ ಗುರುವೇ ಸಚ್ಚಿದಾನಂದ ಎಂಬುದು ನಮ್ಮ ಪರಂಪರೆಯಲ್ಲಿ ಕಂಡು ಬರುವ ನಂಬಿಕೆ.

### ಸಾಕ್ಷಾತ್ಕಾರ ಮತ್ತು ಗುರುತತ್ತ್ವ

ಗುರು ತನ್ನ ಶಿಷ್ಯನನ್ನು ಅಧ್ಯಾತ್ಮ ಮಾರ್ಗದಲ್ಲಿ ಮುನ್ನಡೆಸಿ, ವಿವಿಧ ಅಪಾಯಗಳಿಂದ ರಕ್ಷಿಸಿ, ಕೊನೆಗೆ ಭಗವಂತನ ದರ್ಶನ ಮಾಡಿಸುತ್ತಾನೆ; ಕೊನೆಗೆ ಭಗವಂತನಲ್ಲೇ ಒಂದಾಗುತ್ತಾನೆ ಎಂದು ನಮ್ಮ ಪರಂಪರೆ ತಿಳಿಸಿಕೊಡುತ್ತದೆ. ಶ್ರೀರಾಮಕೃಷ್ಣರು ಹೇಳುತ್ತಿದ್ದ ಒಂದು ಕಥೆಯ ಪ್ರಕಾರ, ಜನಕರಾಜನು ತನ್ನ ಶಿಷ್ಯನಿಗೆ ಬ್ರಹ್ಮಜ್ಞಾನವನ್ನು ಬೋಧಿಸುವ ಮೊದಲು 'ಗುರುದಕ್ಷಿಣೆ ಕೊಡು' ಎಂದನಂತೆ. ಅದೇಕೆ ಮೊದಲು ಕೇಳಿದ? ವಿದ್ಯೆಯನ್ನು ಕಲಿಸಿದ ನಂತರವಲ್ಲವೇ ಗುರುದಕ್ಷಿಣೆ ನೀಡುವುದು — ಎಂದರೆ, ಬ್ರಹ್ಮಜ್ಞಾನವನ್ನು ಕಲಿತುಕೊಂಡ ನಂತರ ಗುರುಶಿಷ್ಯನೆಂಬ ಭೇದವಿರದು; ಆಗ ಯಾರು ಯಾರಿಗೆ ದಕ್ಷಿಣೆ ಕೊಡಬೇಕು? ಗುರು, ಶಿಷ್ಯ ಭೇದವಿರುವುದು ಸಾಕ್ಷಾತ್ಕಾರವಾಗುವುದಕ್ಕೆ ಮೊದಲು, ಅಷ್ಟೆ. ಸಾಕ್ಷಾತ್ಕಾರದಲ್ಲಿ ಎಲ್ಲವೂ ಒಂದಾಗುವುದು.

ಗುರುಶಿಷ್ಯನಿಗೆ ಉಪದೇಶ ಮಾಡುವುದು ಯಾವುದೇ ಸ್ವಾರ್ಥಬುದ್ಧಿಯಿಂದಲ್ಲ; ಅಪಾರ ನಿರ್ವ್ಯಾಜ ಕರುಣೆಯಿಂದ. ಅದಕ್ಕಾಗಿ ಶಿಷ್ಯನು ತನ್ನೆಲ್ಲವನ್ನೂ ಗುರುವಿನ ಪದತಲದಲ್ಲಿ ಅರ್ಪಿಸುತ್ತಾನೆ. ಇದು ಗುರು-ಶಿಷ್ಯಂದಿರ ನಡುವಿನ ಅಸಾಧಾರಣ ಸಂಬಂಧ. ಗುರುವಿನ ಕಡೆಯಿಂದ ನಿಸ್ವಾರ್ಥದಿಂದ ಕೂಡಿದ, ಕರುಣೆ-ದಯೆಗಳಿಂದ ಕೂಡಿದ ಅಸೀಮ ಪ್ರೀತಿ. ಶಿಷ್ಯನ ಕಡೆಯಿಂದ ಗುರುವಿನ ಮೇಲೆ ಅಪರಿಮಿತ ಭಕ್ತಿ, ಗೌರವ, ನಂಬಿಕೆ; ಗುರು ಪರಮಾತ್ಮನಲ್ಲದೆ ಬೇರೆಯಲ್ಲ ಎಂಬ ದೃಢವಾದ ಶ್ರದ್ಧೆ. ಇಂಥ ಬಾಂಧವ್ಯದಿಂದಲೇ ಅಧ್ಯಾತ್ಮವಿದ್ಯೆ ದೀಪ್ತವಾಗಿದೆ; ದಿವ್ಯ ತೇಜಸ್ಸಿನಿಂದ ಪ್ರಕಾಶಿಸುತ್ತಿದೆ. ಇಬ್ಬರ ನಡುವೆ ಸಂವಹನಗೊಂಡ ಈ ವಿದ್ಯೆ ಪರಂಪರಾಗತವಾಗಿ ಇಂದಿನವರೆಗೂ ಮುಂದುವರಿದುಕೊಂಡು ಬಂದಿದೆ; ಭಾರತೀಯ ಸಂಸ್ಕೃತಿಯ ಭದ್ರಬುನಾದಿಯಾಗಿ ನಿಂತಿದೆ.

### ನವೆಂಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೮ | ಶುಕ್ರವಾರ | ಏಕಾದಶಿ |
| ೯ | ಶನಿವಾರ | ಸ್ವಾಮಿ ಸುಬೋಧಾನಂದ ಜಯಂತಿ |
| ೧೧ | ಸೋಮವಾರ | ಸ್ವಾಮಿ ವಿಜ್ಞಾನಾನಂದ ಜಯಂತಿ |
| ೨೩ | ಶನಿವಾರ | ಏಕಾದಶಿ |